ನೋಡುವುದು. ಮೈಯ ಕೀಲುಗಳೆಲ್ಲ ಸಡಿಲವಾಗುವವರೆಗೂ ಹೀಗೇ ಸುಮ್ಮನೆ ಅನಂತ ಕಾಲದವರೆಗೆ ನೋಡುತ್ತಾ ಇರುವುದು. ಅಲ್ಲಿನ ಮುದುಕರು ಮಾಡುವುದು ಇಷ್ಟೇ.

'ಲುವೀನಾದಲ್ಲಿ ಇರುವವರೆಲ್ಲ ಮುದುಕರು, ಮತ್ತೆ ಜನ ಹೇಳುವ ಹಾಗೆ ಇನ್ನೂ ಹುಟ್ಟದೆ ಇರುವವರು, ಅಷ್ಟೆ. ಹೆಂಗಸರು ಇದಾರೆ. ಮೂಳೆ ಚಕ್ಕಳವಾಗಿ ನವೆದು ಹೋದವರು. ಅಲ್ಲಿ ಹುಟ್ಟಿದ ಮಕ್ಕಳೆಲ್ಲ ಊರು ಬಿಟ್ಟು ಹೋಗಿದ್ದಾರೆ. ಬೆಳಗಿನ ಹೊತ್ತು ಹುಟ್ಟುತಿದ್ದ ಹಾಗೇ ಮಕ್ಕಳು ವಯಸಿಗೆ ಬಂದು ಊರು ಬಿಟ್ಟು ಹೋಗುತಿದ್ದರು. ತಾಯಿಯ ಎದೆ ಹಾಲು ಕುಡಿಯುವ ಮಕ್ಕಳು ಅಲ್ಲಿಂದ ಹಾಗೇ ನೆಗೆದು ಗುದ್ದಲಿ ಹಿಡಿದು ಊರು ಬಿಟ್ಟು ಹೋಗುತಾರೆ. ಹಾಗೆ ಅನ್ನುತ್ತಾರೆ ಅಲ್ಲಿನ ಜನ.

'ಮುದುಕರು, ದಿಕ್ಕಿಲ್ಲದ ಹೆಂಗಸರು, ಗಂಡ ದಿಕ್ಕಾಪಾಲಾಗಿ ಹೋದ ಹೆಂಗಸರು ಮಾತ್ರ ಅಲ್ಲಿದ್ದಾರೆ. ಊರಲ್ಲಿ ಆಗಾಗ ಜೋರು ಗಾಳಿ ಬೀಸುತದೆ ಅನ್ನುತಿದ್ದೆನಲ್ಲ ಹಾಗೇನೇ ಊರೂ ಬಿಟ್ಟು ಹೋದವರೂ ಒಂದೊಂದು ಸಾರಿ ಬರುತ್ತಾರೆ. ಅವರು ಬಂದಾಗ ಊರೆಲ್ಲ ಪಿಸುಪಿಸು ಮಾತು, ಅವರು ಹೊರಟ ತಕ್ಷಣ ನರಳಾಟ, ಗೊಣಗಾಟ. ಬಂದವರು ಮುದುಕರಿಗೆ ಅಂತ ಒಂದಿಷ್ಟು ದಿನಸಿ, ಹೆಂಡತಿಯರ ಬಸಿರಲ್ಲಿ ಒಂದು ಮಗು ಇರಿಸಿ ಹೊರಟು ಹೋಗುತ್ತಾರೆ. ಬಂದರೆ ಮತ್ತೆ ಮುಂದಿನ ವರ್ಷವೇ. ಒಂದೊಂದು ಸಲ ಹೋದವರು ಬರುವುದೇ ಇಲ್ಲ. ಇದೇ ಸಂಪ್ರದಾಯ. ಅಲ್ಲಿನವರು ಇದನ್ನು ಕಾನೂನು ಅನ್ನುತಾರೆ. ಎರಡೂ ಒಂದೇ. ಮಕ್ಕಳು ಅಪ್ಪ ಅಮ್ಮಂದಿರಿಗಾಗಿ ದುಡಿಯುತ್ತಾರೆ, ಅವರ ಹಿರಿಯರು, ಹಿರಿಯರ ಹಿರಿಯರು, ಅವರ ಹಿರಿಯರು ಮಾಡಿದ ಹಾಗೇ. ಎಷ್ಟು ತಲೆಮಾರಿನಿಂದ ಈ ಕಾನೂನು ನಡೆದುಕೊಂಡು ಬಂದಿದೆಯೋ...

'ಮುದುಕರು ಹೊಸ್ತಿಲ ಮೇಲೆ ಕೂತು, ಕೈ ಇಳಿಬಿಟ್ಟುಕೊಂಡು ಅವರು ಬರಲಿ, ಸಾವು ಬರಲಿ ಅಂತ ಕಾಯುತ್ತಾರೆ. ಆ ಊರಿನ ಒಂಟಿತನದಲ್ಲಿ ಮಕ್ಕಳ ಕೃತಜ್ಞತೆಯ ಕರುಣೆಗೆ ಕಾಯುತ್ತಾರೆ.

'ಒಂದು ಸಲ ಅವರ ಮನಸ್ಸು ಬದಲಾಯಿಸುವುದಕ್ಕೆ ನೋಡಿದೆ. ಒಳ್ಳೆಯ ಜಮೀನು ಇರುವ ಕಡೆಗೆ ಯಾಕೆ ಹೋಗಬಾರದು ಅಂತ ಅವರನ್ನು ಒಪ್ಪಿಸುವುದಕ್ಕೆ ನೋಡಿದೆ. ನಾವೆಲ್ಲಾ ಊರು ಬಿಟ್ಟು ಹೋಗೋಣ. ಒಳ್ಳೆಯ ಜಾಗದಲ್ಲಿ ಬೇರೆ ಎಲ್ಲಾದರೂ ಇರೋಣ. ಸರ್ಕಾರ ನಮಗೆ ಸಹಾಯ ಮಾಡತದೆ ಅಂದೆ.

'ಕಣ್ಣು ರೆಪ್ಪೆ ಮಿಟುಕಿಸದೆ ನನ್ನ ಮಾತು ಕೇಳಿದರು. ಕಣ್ಣಿನ ಆಳದಿಂದ ಅವರ ದೃಷ್ಟಿ ನನ್ನನ್ನು ನೋಡುತಿತ್ತು. ಒಳಗಿನಿಂದ ಎಲ್ಲೋ ಒಂದಿಷ್ಟೆ ಬೆಳಕು.

'ಸರ್ಕಾರ ನಮಗೆ ಸಹಾಯ ಮಾಡುತ್ತದೆ ಅನ್ನುತೀರಲ್ಲ ಮೇಷ್ಟರೇ, ಸರ್ಕಾರ ನಿಮಗೆ ಪರಿಚಯ ಇದೆಯಾ? ಅಂತ ಕೇಳಿದರು.

'ಸರ್ಕಾರ ಗೊತ್ತು ಅಂದೆ.

'ನಮಗೂ ಗೊತ್ತು. ಸರ್ಕಾರ ನಮಗೂ ಗೊತ್ತು. ಸರ್ಕಾರದ ತಾಯಿ ಯಾರು, ಅದು ನಮಗೆ ಗೊತ್ತಿಲ್ಲ ಅಂದರು.

'ಈ ದೇಶ ನಮ್ಮ ಜನ್ಮದಾತ ಅಂದೆ. ಅವರು ಅಲ್ಲ ಅನ್ನುವ ಹಾಗೆ ತಲೆ ಆಡಿಸಿದರು. ನಕ್ಕರು. ಲುವೀನಾದ ಜನ ನಕ್ಕಿದ್ದನ್ನು ಅದೊಂದೇ ಸಾರಿ ನಾನು ನೋಡಿದ್ದು. ಹುಳುಕು ಹಲ್ಲು ಕಾಣುವ ಹಾಗೆ ನಕ್ಕು, ಇಲ್ಲ, ಸರ್ಕಾರಕ್ಕೆ ತಾಯಿ ಇಲ್ಲ ಅಂದರು.

'ನಿನಗೆ ಗೊತ್ತಾ? ಅವರು ಹೇಳಿದ್ದು ಸರಿ. ಅವರ ಮಕ್ಕಳಲ್ಲಿ ಯಾರಾದರೂ ಏನಾದರೂ ತಪ್ಪು ಮಾಡಿದಾಗ ಮಾತ್ರ ಸರ್ಕಾರ ಅವರನ್ನು ಜ್ಞಾಪಿಸಿಕೊಳ್ಳುತದೆ. ಜನರನ್ನ ಕಳಿಸಿ ತಪ್ಪು